

ಬರೇ ಅಪ್ಪನ ಸೇವಾ ಮಾಡತಿದ್ಲು. ಮನಿ ಆಡಳಿತ ಎಲ್ಲಾ ವೈನಿ ಕೈಯಾಗ ಬಂತು. ಅಪ್ಪ ಹೋದ ಮ್ಯಾಲೆ ಕೃಷ್ಣಣ್ಣ ಹೋದಾಗ ಎಲ್ಲಾ ಕಡೆ ಗುಸುಗುಸು ಸುದ್ದಿ ಶುರುವಾಗಿತ್ತಂತ. ಮೈ ನೀಲಿ ಆಗಿದ್ದಿಲ್ಲಾ... ಅಲ್ಲೆ ಹಾವ ಇದ್ದಿದ್ದಿಲ್ಲಾ... ಮತ್ತೇನೊ ಆಗಿರಬೇಕು ಅನ್ನೋ ಸುದ್ದಿ ಆಮ್ಯಾಲೆ ಗೊತ್ತಾತು. ಆವಾಗ ಅವ್ವ ನನಮುಂದ 'ಇಕಿ ಭಾರಿ ಇದ್ದಾಳ. ತುಸಾ ನೀರಾಗ ಮುಳುಗೊ ಹೆಣಮಗಳಲ್ಲ. ನೀ ನಿನ್ನ ಪಾಲಿಗೆ ಎಲ್ಲರೆ ದೂರ ಹೋಗಿ ಜೀವನಾ ಮಾಡು. ಆಮ್ಯಾಲೆ ನನ್ನ ಕರಿಸಿಗೊ' ಅಂದಿದ್ಲು. ಪ್ರಹ್ಲಾದಾಚಾರಿ ಅಧೆಂಗೊ ನಮ್ಮ ಆಳು ಸೋಮಣ್ಣಗ ಹೇಳಿ ನಮ್ಮವ್ವಗ ಸುದ್ದಿ ಮುಟ್ಟಸಿದ್ದ. ಅಕಿನ ಕಾಶಿಗೆ ಹೋಗಲಿಕ್ಕೆ ಹೇಳಿದಾಕಿ. ಸೋಮಣ್ಣ ಭಾಳ ನಂಬಿಗಸ್ತ. ನಮ್ಮ ಗುಟ್ಟು ಹೊರಗ ಬಂದಿಲ್ಲಾ. ಅಕಿನ್ನ ನಾ ಕಾಶಿಗೆ ಕರಿಸಿ ಯಾತ್ರಾ ಮಾಡಸೇನಿ. ಹೆಂಡ್ತಿ, ಮಗನ್ನ ತೋರಸೇನಿ. ಸ್ವಾದಿವಳಗ ಮನಿ ಅಕಿ ಸಲವಾಗೆ ತೊಗೊಂಡೇನಿ. ಅಲ್ಲೆ ಅಕಿ ಜೋಡಿ ತಿಂಗಳಾನುಗಟ್ಟಲೆ ಇರತೇನಿ. 'ಮನಿತನದ ಮರ್ಯಾದಿ ಮುಖ್ಯ. ಹಳೇದೆಲ್ಲಾ ತಗೀಬ್ಯಾಡಾ. ಅಲ್ಲೆ ಆರಾಮ ಇರು' ಅಂತ ಅಕಿನ ಹೇಳತಾಳ. ನಾ ಸೂಚನಾ ಕೊಟ್ಟರ ಸಾಕು... ಸೋಮಣ್ಣ ಅಕಿನ್ನ ಸ್ವಾದಿಗೆ ಕರಕೊಂಡು ಬರ್ತಾನ. ಅಕ್ಕಾಗೂ ಗೊತ್ತದ. ಎಲ್ಲಾ ಆರಾಮ ನಡದದ. ನಿಂದೊಂದ ನೆನಪು ಮನಸ್ನಾಗ ಕಾಡತಿತ್ತು. ನಿನಗ ಹೇಳಬೇಕಂತ ಜೀವ ತುಡೀತಿತ್ತು. ಖರೇ ಬುದ್ಧಿ ತಡೀತಿತ್ತು. ಇವತ್ತ ನಿನಗೂ ಗೊತ್ತಾತು. ಇದನ್ನ ನಿನ್ನ ಹೊಟ್ಟ್ಯಾಗ ಇಟಗೊ' ಎಂದ. ಅವಾಕ್ಕಾಗಿ ಬಾಯಿ ತೆರೆದೆ. ಎಷ್ಟೊಂದು ರಹಸ್ಯಗಳು ಒಂದೊಂದಾಗಿ ಬಯಲಾಗುತ್ತಿದ್ದವು. ಮಾಯಾಪೆಟ್ಟಿಗೆ ತೆರೆದಂತೆ.. ರಾಕ್ಷಸತ್ವ ಮುಗ್ಧ ಮುಖವಾಡ ಹೊದ್ದು ಮೆರೆಯುತ್ತಿತ್ತು. ಅದಕ್ಕಾಗಿ ನನ್ನ ಜೀವದ ಗೆಳೆಯ ಅಜ್ಞಾತವಾಸ ಅನುಭವಿಸುತ್ತಿದ್ದ. ಅವನಿಗೆ ಭರವಸೆ ನೀಡುವಂತೆ ಅವನ ಕೈ ಒತ್ತಿದೆ. 'ಬಸ್ ಬಿರಜೂ...' ಎಂದನವ. ತೆಪ್ಪ ತೀರದ ಬಳಿ ಸಾರಿತು. 'ನಡಿ ಮನಿಗೆ ಹೋಗೋಣು' ಎಂದವನಿಗೆ ಇಲ್ಲಪಾ... ಇವತ್ತ ರಾತ್ರಿನ ಟ್ರೇನ್ ಅದ ಎಂದೆ. ಭೀಮ್ ಭೈಯ್ಯಾನ ನಂಬರ್ ಕೊಟ್ಟ. ಮತ್ತೊಮ್ಮೆ ಇಬ್ಬರೂ ಅಪ್ಪಿಕೊಂಡು ಹನಿಗಣ್ಣಾಗಿ ಬೀಳ್ಕೊಂಡೆವು. ಬದುಕಿನ ಸಂತೆಯೇ ವಿಚಿತ್ರವೆನಿಸಿತು. ಎಲ್ಲಿಂದೆಲ್ಲಿಗೋ ಪಯಣ... ಜ್ಞಾತ... ಅಜ್ಞಾತಗಳ ನಡುವಿನ ವಿಕ್ಷಿಪ್ತ ಜೀವನ. ಗಂಗಾ ಆರತಿಯ ಪ್ರಭೆ ಎಲ್ಲೆಲ್ಲೂ ಹರಡಿತ್ತು. ಮಧ್ಯೆ ಪ್ರಭೆಯಷ್ಟೇ ದೇದೀಪ್ಯಮಾನವಾಗಿ ಬೆಳಗುತ್ತ ಅಚ್ಯುತ ಸರಿದು ಹೋದ. ನಾನು ನೋಡುತ್ತ ನಿಂತೇ ಇದ್ದೆ.

●